(ಗ) ಯಾದಗಿರಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳು ಒಡೆದು ಹೋಗಿರುವುದು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕಿನಲ್ಲಿ ಕಳೆದ ಸಾರಿ ಬಿದ್ದ ಭಾರಿ ಮಳೆಯಿಂದಾಗಿ ಏಳು ಸಣ್ಣ ನೀರಾವರಿ ಕೆರೆಗಳು ಒಡೆದು ಹೋಗಿವೆ. ಇವುಗಳ ರಿಪೇರಿಗಾಗಿ ಪ್ರಕೃತಿ ವಿಕೋಪದ ಪರಿಹಾರ ನಿಧಿಯಿಂದ ಸುಮಾರು 7 ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಆದರೆ ಸಣ್ಣ ನೀರಾವರಿ ಇಲಾಖೆಯವರು ಸದರಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬದಲು ಒಂದಲ್ಲೊಂದು ಕಾರಣದಿಂದ ಮುಂದೂಡುತ್ತಾ ಬಂದಿದ್ದಾರೆ. ಮುಂದಿನ ಮಳೆಗಾಲ ಪ್ರಾರಂಭವಾಗುವುದರೊಳಗೆ, ಈ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸದರಿ ಕೆರೆಗಳಲ್ಲಿ ನೀರನ್ನು ಸಂಗ್ರಹ ಮಾಡದಿದ್ದರೆ, ಇದನ್ನೆ ಆಶ್ರಯ ಮಾಡಿಕೊಂಡು ನೀರಾವರಿ ಮಾಡುತ್ತಿರುವ ರೈತರಿಗೆ ಬಹಳ ತೊಂದರೆಯಾಗುತ್ತದೆ. ಸದರಿ 7 ಸಣ್ಣ ನೀರಾವರಿ ಕಾಮಗಾರಿಗಳನ್ನು ಇಲಾಖೆಯ ವತಿಯಿಂದ ಅಥವಾ ತುಂಡು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಮುಂದಿನ ಮಳೆಗಾಲ ಪ್ರಾರಂಭವಾಗುವುದರೊಳಗೆ ಸದರಿ ಕಾಮಗಾರಿಗಳನ್ನು ಮುಗಿಸುವುದಕ್ಕೆ ತಕ್ಷಣ ನಿರ್ದೇಶನ ನೀಡುವುದು ಅವಶ್ಯಕತೆ ಇದೆ. ಸರ್ಕಾರ ತನ್ನ ಡಿಸ್ಕ್ರಿಶ್ನರಿ ಗ್ರ್ಯಾಂಟ್‌ನಲ್ಲಿದ್ದ ಹಣವನ್ನು ವಿತರಣೆ ಮಾಡುವಾಗ ಒಂದು ನೀತಿ ನಿಯಮ ಇಲ್ಲದೆ ಬಿಡುಗಡೆ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಉದಾಹರಣೆಗೆ ಹೇಳುವುದಾದರೆ, ಕೆಲವೊಂದು ಜಿಲ್ಲೆಗೆ 20 ಲಕ್ಷ ರೂಪಾಯಿಗಳನ್ನು ಮತ್ತು ಕೆಲವು ಜಿಲ್ಲೆಗಳಿಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಆದರೆ ಹೆಚ್ಚು ಸಣ್ಣ ನೀರಾವರಿ ಕೆರೆಗಳಿರುವ ಯಾದಗಿರಿ ತಾಲ್ಲೂಕಿಗೆ ಒಂದು ಪೈಸೆ ಕೂಡ ಬಿಡುಗಡೆ ಮಾಡದೆ ತಾರತಮ್ಯ ಮಾಡಿದ್ದೀರಿ. ಅದಕ್ಕಾಗಿ ಇದನ್ನು ಯಾವರೀತಿಯಾಗಿ ಸರಿಪಡಿಸುತ್ತೀರೋ ಅಥವಾ ಈ ಏಳು ಸಣ್ಣ ಕಾಮಗಾರಿಗಳನ್ನು ತಕ್ಷಣ ಪ್ರಾರಂಭ ಮಾಡುತ್ತೀರಾ? ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದಾರೆ. ಆದ್ದರಿಂದ, ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು, ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿರತಕ್ಕಂಥ ಸಮಸ್ಯೆಗೆ ನಾಳೆ ದಿವಸ ಉತ್ತರ ಒದಗಿಸಿಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇದರ ಬಗ್ಗೆ ಮೂರು ದಿವಸದ ಹಿಂದೆಯೆ ನೋಟೀಸ್ ಕೊಟ್ಟಾಗ ನಾಳೆ ದಿವಸ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ನಿನ್ನೆ ದಿವಸ ಮತ್ತೆ ಫೋಸ್ಟ್‌ಫೋನ್ ಮಾಡಿ ಇವತ್ತು ತೆಗೆದುಕೊಳ್ಳಲಾಗಿದೆ. ಈಗ ಇರತಕ್ಕಂಥ 3 ಕೋಟಿ ಡಿಸ್ಕ್ರಿಶ್ನರಿ ಹಣವನ್ನು ಯಾರ್ಯಾರು ಅಪ್ರೋಚ್ ಆಗುತ್ತಾರೋ ಅಂಥವರಿಗೆ ಮಾತ್ರ ಕೊಡುತ್ತಿದ್ದೀರಿ. ಆದರೆ ಎಲ್ಲಿ ಅವಶ್ಯಕತೆ ಇದೆ ಅಂಥ ಕಡೆ ಕೊಡುತ್ತಿಲ್ಲ. ಹೀಗಾದರೆ ನಾವೇನು ಮಾಡಬೇಕು? ಮೂರು ದಿವಸವಾಯಿತು. ನಿನ್ನೆ ಕೇಳಿದಾಗ ನಾಳೆ

ತೆಗೆದುಕೊಳ್ಳೋಣ ಎಂದು ಹೇಳಿದರು. ನಾನು ನಿನ್ನೆ ಮುಂದಕ್ಕೆ ಹಾಕಲು ಒಪ್ಪಿಕೊಂಡಿದ್ದೇನೆ. ಏನಾಗಿದೆ ಎಂದರೆ ಡಿಸ್ಟ್ರಿಷನರಿ ಹಣ ಮೂರು ಕೋಟಿ ರೂಪಾಯಿಗಳು ಯಾರು ಆವರಿಗೆ ಬಂದು ಅಪ್ರೋಚ್ ಆಗಿದ್ದಾರೆ, ಆವರಿಗೆ ನೀಡಿರುತ್ತಾರೆ. ಎಲ್ಲಿ ನೀಡ್ ಬೇಸ್ಡ್ ಇದೆ ಅಲ್ಲಿ ಕೊಡಲೇ ಇಲ್ಲ. ಹೀಗಾದರೆ ಮಾಡುವುದು ಹೇಗೆ? ಮಾನ್ಯ ಸಚಿವರು ಬಂದಿಲ್ಲವೆಂದು ಕೇಳಿದರೆ, ನೀವು ಸಿಟ್ಟಿಗೆ ಬಂದಿರುತ್ತೀರಿ ಎಂದು ಹೇಳುತ್ತೀರಿ. ಇದಕ್ಕೆ ಪರಿಹಾರ ಏನು?

ಶ್ರೀ ಎಂ.ಪಿ. ಪ್ರಕಾಶ್ :— ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿ ಇರುವುದರಿಂದ ಬಂದ ನಂತರ ಉತ್ತರವನ್ನು ಕೊಡಿಸಲಾಗುವುದು. ಸಣ್ಣ ನೀರಾವರಿಗೆ ಸಂಬಂಧಪಟ್ಟ ವಿಚಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಳೆಗೆ ಕೆರೆಗಳು ಒಡೆದು ಹೋಗಿವೆ. ಆದರ ದುರಸ್ಥಿಗೆ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಹೇಳಿದರು. 3 ಕೋಟಿ ರೂಪಾಯಿಗಳನ್ನು ತಮಗೆ ಬೇಕಾದವರಿಗೆ ಬಿಡುಗಡೆ ಮಾಡಿರುತ್ತಾರೆ. ಎಲ್ಲಿ ಕೆರೆಗಳು ಒಡೆದು ಹೋಗಿವೆ ಅವುಗಳ ರಿಪೇರಿಗೆ ಹಣವನ್ನು ಬಿಡುಗಡೆ ಮಾಡಲಿಲ್ಲವೆಂದರೆ ಹೇಗೆ? ಇದರ ಬಗ್ಗೆ ಏನು ಹೇಳಬೇಕು. ಮತ್ತು ಇದರ ಬಗ್ಗೆ ಯಾರಿಗೆ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಧ್ಯಾಹ್ನದೊಳಗಾಗಿ ತಮಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸಲಾಗುವುದು. ಆವರು ಮೇಲ್ಮನೆಯಲ್ಲಿ ಇದ್ದಾರೆ. ಬಹಳ ಮುಖ್ಯವಾದ ವಿಚಾರವನ್ನು ಎತ್ತಿದ್ದೀರಿ, ಉತ್ತರವನ್ನು ಕೊಡಿಸಿ ಕೊಡುತ್ತೇನೆ.

(ಘ) ಏಳನೇ ತರಗತಿ ಪರೀಕ್ಷೆಯ ಮೌಲ್ಯಮಾಪನ ಸ್ಥಗಿತ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಹೆಚ್.ಜಿ. ಗೋವಿಂದೇಗೌಡರ ಗಮನವನ್ನು ಸೆಳೆಯುತ್ತಾ, 7ನೇ ತರಗತಿಯ ಪರೀಕ್ಷೆಯ ಮೌಲ್ಯಮಾಪನ ನೆನೆಗುದಿಗೆ ಬಿದ್ದಿದೆ. ಸರ್ಕಾರ ಮತ್ತು ಶಿಕ್ಷಣ ಸಚಿವರ ಜಗಳದಲ್ಲಿ 8 ಲಕ್ಷ ಜನ ವಿದ್ಯಾರ್ಥಿಗಳ ಜೀವನ ಇವತ್ತು ಜಜ್ಜರಿತವಾಗಿದೆ. ಆ ಮೌಲ್ಯಮಾಪನದ ಬಹಿಷ್ಕಾರದಿಂದ 8 ಲಕ್ಷ ಜನ ವಿದ್ಯಾರ್ಥಿಗಳಿಗೆ ಆ ಬಹಿಷ್ಕಾರದ ಬಗ್ಗೆ ಆವರ ತಲೆಯಲ್ಲಿ ಕುಳಿತುಕೊಳ್ಳುತ್ತದೆ. ನಾನು ಹೇಳುವುದು ಇಷ್ಟೆ: ಮೌಲ್ಯಮಾಪನ ಮಾಡುವುದು ಕೂಡ ಒಂದು ಎಸೆನ್ಷಿಯಲ್ ಸರ್ವೀಸ್ ಎಂದು ಕರೆದು, ಇದು ಪ್ರತಿಸಲವಾಗುವ ಒಂದು ಪ್ರಹಸನವಾಗಿದೆ. ಪರೀಕ್ಷೆ ಬಂದರೆ ಮೌಲ್ಯಮಾಪನದ ಬಹಿಷ್ಕಾರ, ಆದಕ್ಕೆ ಆ ವಿದ್ಯಾರ್ಥಿಗಳು ಏನು ಮಾಡುತ್ತಾರೆ. ಇವರನ್ನು ಆ ವಿದ್ಯಾರ್ಥಿಗಳ ಜೊತೆಗೆ ಬಿಲ್ಲಾಟವಾಡುವುದಕ್ಕೆ ತಾವು ಏಕೆ ಬಿಡುತ್ತೀರಾ? ಆವರು 50 ಪೈಸೆಯಿಂದ ಒಂದು ರೂಪಾಯಿಯನ್ನು ಮೌಲ್ಯಮಾಪನಕ್ಕೆ ಕೊಡಿ ಎಂದು ಕೇಳುತ್ತಿದ್ದಾರೆ, ಇದನ್ನು ಆ ಪರೀಕ್ಷೆಗೆ ಮುಂಚೆ ಇದನ್ನು ಇತ್ಯರ್ಥ ಮಾಡಬಹುದಾಗಿತ್ತು. ಅಥವಾ ಇನ್ನಾವುದೋ ಪ್ಯಾರಿಟಿ